8. ಗಮನ ಸೆಳೆಯುವ ಸೂಚನೆಗಳು

ವಿಷಯ (ಅ) ಸೂಲನಾಯಕನಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ ನಾಯ್ಡುರವರ ಕೊಲೆ ನಂತರ ಪರಿಶಿಷ್ಟ ಜಾತಿಯ ಜನರ ಮೇಲೆ ಪೋಲಿಸ್ ದೌರ್ಜನ್ಯ.

SRI M.MALLIKARJUNA (GURMITKAL):- Sir, I call the attention of the Minister of State for Home and Wakfs regarding atrocities on Scheduled Caste people by the Police after the assassination of Sri Venkatesh Naidu in Sulanayakana Halli of Y.N.Hosakote Hobli of Pavagada Taluk.

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನ ಸೂಲನಾಯಕನಹಳ್ಳಿ ಒಂದು ಸಣ್ಣ ಹಳ್ಳಿಯಾಗಿದ್ದು ಇದರ ಜನ ಸಂಖ್ಯೆ ಸುಮಾರು 2500 ಇರುತ್ತದೆ. ಇದರಲ್ಲಿ ಸುಮಾರು ಶೇಕಡಾ 50ರಷ್ಟು ಪರಿಶಿಷ್ಟ ಜಾತಿ ಉಳಿದ ಶೇಕಡಾ 50ರಲ್ಲಿ ಕಮ್ಮಾರೆಡ್ಡಿ ನಾಯಕರು ಮತ್ತು ಗೊಲ್ಲ ಜನಾಂಗದವರು ಇರುತ್ತಾರೆ. ಶ್ರೀ ಗೋವಿಂದಪ್ಪ (ಕಮ್ಮಾರೆಡ್ಡಿ) ಮತ್ತು ಅವರ ಮಗ ವೆಂಕಟೇಶ್ ನಾಯ್ಡು ಮತ್ತು ಪ.ಜಾತಿ ದುರ್ಗಪ್ಪ ಎಂಬುವವರಿಗೂ 9 ವರ್ಷಗಳಿಂದ ಜಮೀನಿನ ವ್ಯಾಜ್ಯ ಕೋರ್ಟ್‌ನಲ್ಲಿರುತ್ತದೆ.

ದಿನಾಂಕ 5-7-1996ರಂದು ಬೆಳಿಗ್ಗೆ ಸುಮಾರು 6-30 ಗಂಟೆಗೆ ವೆಂಕಟೇಶನಾಯ್ಡು ತನ್ನ ಮಾವನ ಮನೆಯಿಂದ ಪ.ಜಾತಿ ಕೇರಿಯ ಮಾರ್ಗವಾಗಿ ತನ್ನ ಸ್ವಂತ ಮನೆಗೆ ನಡೆದುಕೊಂಡು ಬರುತ್ತಿರುವಾಗ ಪ.ಜಾತಿ ಕಾಲೋನಿಯ ದುರ್ಗಪ್ಪ ಮತ್ತು ಇತರರು ಅವನಿಗೆ ಬಂದೂಕಿನಿಂದ ಗುಂಡು ಹಾಕಿ ಕೊಲೆ ಮಾಡಿರುತ್ತಾರೆ. ವೆಂಕಟೇಶನಾಯ್ಡು (ವಯಸ್ಸು 35-40 ವರ್ಷ) ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ. ಈ ಘಟನೆಯನ್ನು ನೋಡಿದ ಈತನ ಸಂಬಂಧಿಕರು ಮತ್ತು ಇತರ ಕೆಲವು ಜನರು ಸೇರಿ ಪ.ಜಾತಿ ಗುಡಿಸಲುಗಳಿಗೆ ಬೆಂಕಿ ಹಾಕುವುದು ಮತ್ತು ಕಲ್ಲು ತೂರಾಟ ವಗೈರೆ ಮಾಡಿರುತ್ತಾರೆ. ಈ ಘಟನೆಯಿಂದ 64 ಹೆಂಚಿನ ಮನೆಗಳು 28 ಗುಡಿಸಲುಗಳು 12 ಕಲ್ಲಿನ ಗೋಡೆ ಕಟ್ಟಡಗಳು 2 ಸಿಮೆಂಟ್ ಗೋಡೆ ಕಟ್ಟಡಗಳು ಮತ್ತು 2 ದನಕರುಗಳು ಹಾನಿಯಾಗಿರುತ್ತದೆ.

ವಿಷಯವನ್ನು ತಿಳಿದ ಡಿ.ಎಸ್.ಪಿ. ಮಧುಗಿರಿಯವರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. 2 ಫೈರ್ ಬ್ರಿಗೇಡ್ ವಾಹನಗಳು ಶಿರಾ ಪಟ್ಟಣದಿಂದ ಬಂದು ಬೆಂಕಿಯನ್ನು ಆರಿಸಿರುತ್ತಾರೆ. ತದ ನಂತರ ಕೇಂದ್ರ ವಲಯದ ಡಿ.ಐ.ಜಿ.ರವರು ಸೂಕ್ತ ಪೋಲೀಸ್ ರಕ್ಷಣೆ ನೀಡುವ ಆಶ್ವಾಸನೆ ನೀಡಿದ ನಂತರ

ಶವವನ್ನು ಮರಣೋತ್ತರ ಪರೀಕ್ಷಣೆಗೆ ಕಳುಹಿಸಿರುತ್ತಾರೆ. ವೈ.ಎನ್.ಹೊಸಕೋಟೆ ಪೋಲೀಸ್ ಠಾಣೆಯಲ್ಲಿ ಅಪರಾಧವನ್ನು ದಾಖಲು ಮಾಡಿಕೊಂಡು ಡಿ.ಎಸ್.ಪಿ. ಮಧುಗಿರಿರವರು ಮುಂದಿನ ತನಿಖೆಯನ್ನು ನಡೆಸುತ್ತಿದ್ದಾರೆ.

ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ದಿನಾಂಕ 7-7-96ರಂದು ಸದರಿ ಹಳ್ಳಿಗೆ ಭೇಟಿ ನೀಡಿ, ಮೃತನ ಸಂಬಂಧಿಕರು ಮತ್ತು ಹಳ್ಳಿಯ ಇತರೆ ಜನರನ್ನು ಭೇಟಿಯಾಗಿ ಅವರಿಗೆ ಹೆಚ್ಚಿನ ಸಂರಕ್ಷಣೆ ಒದಗಿಸುವ ಬಗ್ಗೆ ಆಶ್ವಾಸನೆ ನೀಡಿರುತ್ತಾರೆ. ಈಗ ಹುಲಿ ಹಳ್ಳಿಯಲ್ಲಿ ಒಂದು ರಾಜ್ಯ ಸಶಸ್ತ್ರ ಮೀಸಲು ಪಡೆಯ ತುಕಡಿ ಒಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಹೆಡ್ ಕಾನ್ಸ್‌ಟೇಬಲ್ ಮತ್ತು ನಾಲ್ಕು ಕಾನ್ಸ್‌ಟೇಬಲ್‌ಗಳನ್ನು ಖಾಯಂ ಆಗಿ ಹಳ್ಳಿಯಲ್ಲಿ ನಿಯೋಜಿಸಲಾಗಿದೆ. ಮಧುಗಿರಿ ಡಿ.ವೈ.ಎಸ್.ಪಿ.ರವರ ನೇತೃತ್ವದಲ್ಲಿ ಒಂದು ವಿಶೇಷ ದಳವನ್ನು ರಚಿಸಲಾಗಿದ್ದು ಅವರು ಆರೋಪಿಗಳನ್ನು ಬೇಗನೆ ಪತ್ತೆ ಮಾಡುವಂತೆ ನಿರ್ದೇಶನ ನೀಡಲಾಗಿದೆ.

ದಿನಾಂಕ 7-6-96ರಂದು ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರೊಂದಿಗೆ ಅನಂತಪುರ ಜಿಲ್ಲಾ ಪೊಲೀಸ್ ಅಧೀಕ್ಷರು ಶ್ರೀ ನಾರಾಯಣ್ ಅವರು ಅಪರಾಧ ನಡೆದ ಸ್ಥಳಗಳಿಗೆ ಭೇಟಿ ನೀಡಿರುತ್ತಾರೆ. ಅವರು ಸ್ಥಳೀಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಪರಾಧಿಗಳನ್ನು ಪತ್ತೆ ಹಚ್ಚುವ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ನೀಡಿರುತ್ತಾರೆ. ದಿನಾಂಕ 130-7-96ರಂದು ಈ ಪ್ರಕರಣಗಳ ತನಿಖೆಯನ್ನು ಸ್ಥಳೀಯ ಪೊಲೀಸರಿಂದ ಸಿಒಡಿಯವರು ವಹಿಸಿಕೊಂಡಿರುತ್ತಾರೆ.

ವೈ.ಎನ್.ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ವೆಂಕಟೇಶ್ ನಾಯ್ಡು ಕೊಲೆ ಮೊಕದ್ದಮೆ ಸಂಖ್ಯೆ: 117:96ರಲ್ಲಿ ಮೂರು ಜನ ಅಪರಾಧಿಗಳನ್ನು ಬಂಧಿಸಲಾಗಿದ್ದು, ಅವರೆಲ್ಲ ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ.

ಈ ಪ್ರಕರಣವಲ್ಲದೆ ದಿನಾಂಕ 9-7-96ರಿಂದ 12-7-96ರವರೆಗೆ ವೈ.ಎನ್.ಹೊಸಕೋಟೆ ಪೊಲೀಸರು ಚಿಕ್ಕಹಳ್ಳಿ ಕೆ.ರಾಮಪುರ, ದೊಡ್ಡಳ್ಳಿಯಲ್ಲಿ ವರದಿಯಾದ ನಾಲ್ಕು ದೊಂಬಿ ಗಲಭೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಲವರನ್ನು ಬಂಧಿಸಿರುತ್ತಾರೆ. ಈ ಪ್ರಕರಣಗಳು ದಿನಾಂಕ 9-3-96 ಮತ್ತು 23-6-96ರ ಮಧ್ಯೆ ಬೇರೆ ಬೇರೆ ದಿವಸಗಳಲ್ಲಿ ವರದಿಯಾಗಿರುತ್ತದೆ. ಇದಲ್ಲದೆ ದಿನಾಂಕ 12-7-96ರಂದು ನೀಲಮ್ಮನಹಳ್ಳಿ ಗೇಟಿನ ಹತ್ತಿರ ನಾಲ್ಕು ಜನ ಆರೋಪಿಗಳನ್ನು ಸಿ.ಆರ್.ಪಿ.ಸಿ. ಕಲಂ 110 (ಇ ಮತ್ತು ಜಿ)ನಲ್ಲಿ ಬಂಧಿಸಲಾಗಿದೆ.

ಈ ಮೇಲಿನ ಪ್ರಕರಣಗಳಲ್ಲಿ ಒಟ್ಟು 34 ಜನರನ್ನು ಬಂಧಿಸಲಾಗಿದ್ದು ಅವರಲ್ಲಿ 15 ಜನ ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ.

ಶ್ರೀ ವೆಂಕಟೇಶ್‌ನಾಯ್ಡುರವರ ಕೊಲೆಯ ನಂತರ ಪರಿಶಿಷ್ಟ ಜಾತಿ ಜನಾಂಗದವರ ಮೇಲೆ ಪೊಲೀಸರು ನಡೆಸಿರುವರೆನ್ನಲಾದ ದೌರ್ಜನ್ಯದ ಕುರಿತು ಯಾವುದೇ ಘಟನೆಗಳು

ಇರುವುದಿಲ್ಲ.

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ತಪ್ಪು ಮಾಡಿದವರು ಯಾರೇ ಇರಲಿ ಅವರಿಗೆ ಶಿಕ್ಷೆ ಆಗಲೇಬೇಕು. 34 ಜನರಲ್ಲಿ ಸುಮಾರು 15 ಜನ ಪರಿಶಿಷ್ಟ ಜಾತಿಯವರಿಗೆ ಸೇರಿದವರು ಇದ್ದಾರೆಂದು ತಾವು ಹೇಳಿದಿರಿ, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಬೇಕು. ಅವರು ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಆದರೆ ಈ 5ನೇ ತಾರೀಖಿನಲ್ಲಿ ಆದಂಥ ಘಟನೆ ಹಿನ್ನೆಲೆಯಲ್ಲಿ ಇಡೀ ಹರಿಜನ ಓಣಿಗೆ ಅಂದರೆ ಅಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಎಲ್ಲಾ ಮನೆಗಳನ್ನು ಕೂಡ ಧ್ವಂಸ ಮಾಡತಕ್ಕಂಥ ಕಾರಣ ಏನು ಇತ್ತು ಮತ್ತು ಕಾನೂನನ್ನೇ ತಮ್ಮ ಕೈಯಲ್ಲಿ ತೆಗೆದುಕೊಂಡು ಅಲ್ಲಿನ ಜನ ಏನು ಬೇರೆಯವರು ಮಾಡಿದ್ದಾರೆ ಅಥವಾ ನಾಯ್ಡುರವರ ಪರವಾಗಿ ಇರತಕ್ಕಂಥ ಜನ ಹೋಗಿ ಅಲ್ಲಿ ಇಡೀ ಪರಿಶಿಷ್ಟ ಜಾತಿಯವರ ಲೊಕಾಲಿಟಿಯನ್ನೇ ಏನು ಧ್ವಂಸ ಮಾಡಿದ್ದಾರೆ ಅವರ ಪೈಕಿ ಎಷ್ಟು ಜನರನ್ನು ಹಿಡಿದಿದ್ದೀರಿ ಎನ್ನತಕ್ಕಂಥದ್ದು ಬಹಳ ಮುಖ್ಯ. ಏಕೆಂದರೆ ಇಲ್ಲಿ ಒಬ್ಬನನ್ನು ಕೊಲೆ ಮಾಡಿ ಪರಾರಿ ಆದಂಥವರು ಸಿಕ್ಕುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಆದರೆ ಅಲ್ಲಿಗೆ ಹೋದಂಥ 15 ಜನರನ್ನು ಹಿಡಿದಿದ್ದೀರಿ. ಆದರೆ ಅಲ್ಲಿ ಇಡೀ ಊರನ್ನೇ ಸುಟ್ಟವರಲ್ಲಿ ತಾವು ಎಷ್ಟು ಜನರನ್ನು ಹಿಡಿದಿದ್ದೀರಿ ಮತ್ತು ಅವರನ್ನು ಏನು ಮಾಡಿದಿರಿ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳಬೇಕು. ಎರಡನೆಯದು, 5ನೇ ತಾರೀಖು ಈ ಘಟನೆಯಾದ ಮೇಲೆ 7ನೇ ತಾರೀಖು ಆ ಊರಿನಲ್ಲಿ ಒಂದು ಸ್ಪೆಷಲ್ ಫೋರ್ಸ್ ಅನ್ನು ಮಾಡಿ ಅಲ್ಲಿಗೆ ಒಂದು ವ್ಯಾನ್ ಕಳುಹಿಸಿ ಹತ್ತಾರು ಪೊಲೀಸರನ್ನು ಸೇರಿಸತಕ್ಕಂಥ ವ್ಯವಸ್ಥೆ ಮಾಡಿದರು. ಎಂದರೆ ಎಲ್ಲಾ ಮನೆಗಳನ್ನು ಸುಟ್ಟಮೇಲೆ, ಎಲ್ಲಾ ಜನ ಊರು ಬಿಟ್ಟು ಹೋದಮೇಲೆ 7ನೇ ತಾರೀಖು ನೀವು ಸ್ಪೆಷಲ್ ಫೋರ್ಸ್‌ನ್ನು ಕಳುಹಿಸಿ ಈ ವ್ಯವಸ್ಥೆಯನ್ನು ಮಾಡಿದ್ದೀರಿ. ಇದರಿಂದ ಏನು ತೋರಿಸುತ್ತಾ ಇದೆಯೆಂದರೆ ಪೋಲೀಸರು ನಾಯ್ಡು ಅವರ ಮೇಲೆ ಮಾಡಿದಂಥ ಅತ್ಯಾಚಾರ ಅಥವಾ ಅವರಿಗೆ ಗುಂಡಿನ ಏಟು ಹಾಕಿ ಕೊಂದಂಥವರಿಗೆ ಶಿಕ್ಷೆ ಕೊಡಬೇಕು, ಅದು ಬೇರೆ ವಿಷಯ. ಅದಕ್ಕೆ ಯಾರೂ ಕೂಡ ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿರ್ದೋಷಿಯಾದ ಜನರಿಗೆ ಪೊಲೀಸರೂ ಕೂಡ ಇವತ್ತು ಮುಂದೆ ಬಂದು ತೊಂದರೆ ಕೊಡುತ್ತಿದ್ದಾರೆ. ಮತ್ತು ಆ ತೊಂದರೆ ಒಂದೇ ಊರಿನಲ್ಲಿ ಅಲ್ಲ, ಅಕ್ಕಪಕ್ಕದ 20-25 ಹಳ್ಳಿಗಳಲ್ಲಿ ಇರತಕ್ಕಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀವೆಲ್ಲರೂ ಕೂಡ ನಕ್ಸಲೈಟ್ಸ್‌ಗೆ ಸೇರಿದವರಾಗಿದ್ದೀರಿ, ನೀವೆಲ್ಲರೂ ಕೂಡ ಪೀಪಲ್ಸ್ ವಾರ್ ಗ್ರೂಪ್‌ಗೆ ಸೇರಿದವರು ಇದ್ದೀರಿ ಎಂದು ಹೇಳಿ ಅಲ್ಲಿಯ ಜನರನ್ನು ಕರೆದುಕೊಂದು ಬರುವುದು, ಹೊಡೆದು ನಂತರ ಬಿಡುವುದು. ಹೀಗೆ ಮಾಡುವುದರಿಂದ 20-25 ಹಳ್ಳಿಗಳಲ್ಲಿ ಕೂಡ ಭಯದ ವಾತಾವರಣದಿಂದ ಅಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಊರು ಬಿಟ್ಟು ಓಡಿಹೋಗುತ್ತಾ ಇದ್ದಾರೆ. ಅದಕ್ಕೆ ನೀವು ಏನು ವ್ಯವಸ್ಥೆ ಮಾಡಿದ್ದೀರಿ? ನಾನು ಮುಖ್ಯವಾಗಿ ಏನು ಹೇಳುತ್ತೇನೆಂದರೆ ಈ ಹೆರ್ಯಾಸ್‌ಮೆಂಟ್ ಮಾಡುವುದರಲ್ಲಿ

ಪೋಲೀಸರ ಕೈವಾಡ ಇದೆ. ಯಾರು ಪೀಪಲ್ಸ್ ವಾರ್ ಗ್ರೂಪ್‌ಗೆ ಸಂಬಂಧಪಟ್ಟವರು ನೇರವಾಗಿ ಅಟ್ಯಾಕ್ ಮಾಡಿ ನಾಯ್ದ ಅವರ ಜೀವವನ್ನು ತೆಗೆದುಕೊಂಡಿದ್ದಾರೆ ಅವರ ಬಗ್ಗೆ ನೀವು ತನಿಖೆ ಮಾಡಿ; ಅವರನ್ನು ಅರೆಸ್ಟ್ ಮಾಡಿ, ಅವರ ಬಾಯಿ ಬಿಡಿಸುವುದಕ್ಕೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಿ. ಅದನ್ನು ಬಿಟ್ಟು ಅಮಾಯಕ ಜನರ ಹತ್ತಿರ ದುಡ್ಡು ವಸೂಲಿ ಮಾಡುವುದಕ್ಕೆ ಅವರನ್ನು ಹಿಡಿದುಕೊಂಡು ಬರುವುದು, ಅವರಿಗೆ ಬಡಿಯುವುದು, ಅವರನ್ನು ಹೊಡೆದ ನಂತರ ಅವರಿಂದ ದುಡ್ಡು ವಸೂಲಿ ಮಾಡಿಕೊಂಡು ಪುನಃ ಅವರನ್ನು ಬೀದಿಯಲ್ಲಿ ಬಿಡುವುದರಿಂದ ಹತ್ತಾರು ಹಳ್ಳಿಗಳಲ್ಲಿ ಇವತ್ತು ಜನ ವಲಸೆ ಹೋಗುತ್ತಿದ್ದಾರೆ. ಊರು ಬಿಟ್ಟು ಹೊರಗಡೆ ಹೋಗುತ್ತಿದ್ದಾರೆ, ಅದರಿಂದ ಒಂದು ಭಯದ ವಾತಾವರಣ ಉಂಟಾಗಿ ಅಲ್ಲಿ ಒಬ್ಬರೂ ಸಹ ಇರುವುದಕ್ಕೆ ತಯಾರಿಲ್ಲ. ಅದಕ್ಕೆ ಅಲ್ಲಿ ವಿಶೇಷವಾದಂಥ ಪೊಲೀಸ್ ವ್ಯವಸ್ಥೆ ಮಾಡಿದ್ದೇವೆಂದು ಏನು ಹೇಳಿದಿರಿ, ಈ ಪೊಲೀಸರು ಪ್ರೊಟೆಕ್ಷನ್ ಕೊಡುತ್ತಿಲ್ಲ. ಈ ಪೊಲೀಸರು ಲ್ಯಾಂಡ್‌ಲಾರ್ಡ್ ಪರವಾಗಿ, ಆತ ಸತ್ತಿದ್ದಾನೆ ಎನ್ನತಕ್ಕಂಥ ನೆಪದಲ್ಲಿ ಅವರ ಪರವಾಗಿ ಅವನ ಜನ ಇಂಥಿಂಥವರು ಗಲಾಟೆ ಮಾಡಿದರು ಎಂದು ಯಾರನ್ನು ತೋರಿಸಿ ಹೇಳುತ್ತಾರೋ ಅಂತವರನ್ನು ಪೊಲೀಸ್ ಸ್ಟೇಷನ್‌ಗೆ ಕರೆಯುವುದು ಹೊಡೆಯುವುದು ಮತ್ತು ಕಳುಹಿಸುವುದು. ಹೀಗೆ ನೂರಾರು ಜನರಿಗೆ ಅನಾವಶ್ಯಕವಾಗಿ ಕಿರಿಕುಳವನ್ನು ಕೊಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ತಾವು ತೆಗೆದುಕೊಂಡ ಕ್ರಮ ಏನು ಎನ್ನತಕ್ಕಂಥದ್ದನ್ನು ಕೂಡ ಇದರಲ್ಲಿ ತಾವು ಹೇಳಬೇಕು. ಮತ್ತು ಈ ತೊಂದರೆ ಸೂಲನಾಯಕನ ಹಳ್ಳಿಗೆ ಮಾತ್ರ ಅಲ್ಲ. ಅದರ ಅಕ್ಕಪಕ್ಕದ ಹಳ್ಳಿಗಳಲ್ಲಿಯೂ ಭಯದ ವಾತಾವರಣ ಇದ್ದು ಇವತ್ತು ಊರುಗಳನ್ನು ಬಿಟ್ಟು ಹೋಗುತ್ತಿದ್ದಾರೆ ಅವರಿಗೆ ಪುನಃ ಊರಿಗೆ ಬರತಕ್ಕಂತಹ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಮಾಡುತ್ತೀರಿ? ಅವರಿಗೆ ಯಾವ ರೀತಿಯಲ್ಲಿ ರಕ್ಷಣೆಯನ್ನು ಸರ್ಕಾರದವರು ಕೊಡುತ್ತಾರೆಂಬ ಬಗ್ಗೆ ಹೇಳಿಕೆಯಲ್ಲಿ ಮಾನ್ಯ ಸಚಿವರು ಹೇಳಿಲ್ಲ. ಆ ಬಗ್ಗೆ ಸ್ಪಷ್ಟಪಡಿಸಬೇಕು ಮತ್ತು ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಗಳು ಯಾರು ದುರ್ವರ್ತನೆಯನ್ನು ಮಾಡುತ್ತಿದ್ದಾರೆ ಯಾರು ಪರ್ಪಸ್‌ಲಿ ಕಿರುಕುಳ ಮಾಡುತ್ತಿದ್ದಾರೆ, ಈ ಕೇಸ್‌ನಲ್ಲಿ ಭಾಗಿಗಳು ಇಲ್ಲದೆ ಇರತಕ್ಕಂತಹ ಮುಗ್ಧ ಜನರನ್ನು ಪೊಲೀಸ್ ಠಾಣೆಗೆ ಕರೆದು ತಂದು ಅವರಿಂದ ದುಡ್ಡನ್ನು ದೋಚಿಕೊಂಡು ಅವರಿಗೆ ಹೊಡೆದು ಬಡಿದು ಪುನಃ ಕಳುಹಿಸತಕ್ಕಂತಹ ಕೆಲಸವನ್ನು ಯಾರು ಮಾಡುತ್ತಿದ್ದಾರೆ ಅವರಿಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆಯೂ ಸಹ ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆಯವರು ಅಲ್ಲಿಯ ಪರಿಶಿಷ್ಟ ಜಾತಿಯ ಜನರು ಮನೆಗಳನ್ನು ಬಿಟ್ಟು ಬೇರೆ ಹೋಗುತ್ತಿದ್ದಾರೆಂದು ಹೇಳಿದರು. ಅವರು ಹೇಳಿದ್ದುದು ನಿಜ. ಪೋಲೀಸ್‌ನವರು ಸೂಲನಾಯಕನಹಳ್ಳಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಈಗ ಸೂಲನಾಯಕನಹಳ್ಳಿಯಲ್ಲಿ ಯಾವುದೇ ಗಲಾಟೆಯೂ

ಇರುವುದಿಲ್ಲ ತಾವುಗಳು ಊರಿಗೆ ಬರಬಹುದೆಂದು ಧ್ವನಿವರ್ಧಕ ಯಂತ್ರಗಳಲ್ಲಿ ಅನೌನ್ಸ್ ಮಾಡಿದ್ದಾರೆ. ಆ ಪ್ರದೇಶಕ್ಕೆ ಹಿರಿಯ ಪೋಲೀಸ್ ಅಧಿಕಾರಿಗಳೆಲ್ಲರೂ ಹೋಗಿ ಕ್ಯಾಂಪ್ ಮಾಡಿದರು, ಆಮೇಲೆ ವಿಧಾನ ಮಂಡಲ ಸಮಿತಿಯೂ ಸಹ ಆ ಪ್ರದೇಶಕ್ಕೆ ಹೋಗಿ ಎಸ್.ಸಿ.:ಎಸ್.ಟಿ. ಜನಾಂಗದವರನ್ನು ಭೇಟಿ ಮಾಡಿ ಬಂದರು ಆಗ ಎಸ್.ಸಿ.:ಎಸ್.ಟಿ. ಜನಾಂಗದವರಿಗೆ ನಂಬಿಕೆ ಬಂದು ತಮ್ಮ ಹಳ್ಳಿಗಳಿಗೆ ವಾಪಸ್ಸು ಬರುವುದಕ್ಕೆ ಶುರು ಮಾಡಿದ್ದಾರೆ. ಆ ಪ್ರದೇಶದಲ್ಲಿ ಮುಗ್ಧ ಜನರನ್ನು ಎಳೆದುಕೊಂಡು ಹೋಗಿ ಹೊಡೆಯುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಕೆಲವು ಕಡೆ ಗಲಾಟೆಯಾದಾಗ ನೋಡಿದ್ದೇನೆ. ಕೆಲವು ಮುಗ್ಧ ಜನರು ಅರೆಸ್ಟ್ ಆಗಿಬಿಡುತ್ತಾರೆ. ಕೆಲವು ಕಡೆ ಅವರ ಮೇಲೆ ಕಿರುಕುಳವನ್ನು ಕೊಡುತ್ತಾರೆ. ನಾನು ಕೂಡಲೇ ಇದರ ಪರಿಶೀಲನೆಯನ್ನು ಮಾಡಿ ಸಂಬಂಧಪಟ್ಟಂತಹ ಅಧಿಕಾರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇನ್ನೊಂದು ವಿಚಾರವನ್ನು ಏನು ಪ್ರಸ್ತಾಪ ಮಾಡಿದರು ಎಂದರೆ ವೆಂಕಟೇಶ್ ನಾಯ್ಡುರವರ ಕೊಲೆಗೆ ಸಂಬಂಧಿಸಿದಂತೆ ಸರ್ಕಾರದವರು ತನಿಖೆಯನ್ನು ನಡೆಸುತ್ತಿದ್ದೀರಿ, ಅದಕ್ಕೆ ಪ್ರತಿಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮನೆಗಳನ್ನು ಧ್ವಂಸ ಮಾಡಿದ್ದಾರೆ ಯಾರು ಕಾನೂನನ್ನು ಕೈಗೆ ಎತ್ತಿಕೊಂಡು ಈ ಎಲ್ಲಾ ದುರ್ವರ್ತನೆಯನ್ನು ಮಾಡಿದ್ದಾರೆ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆಯೂ ಕೂಡ ಅವರಿಗೆ ಹೇಳಿ.

ಶ್ರೀ ಆರ್.ರೋಷನ್‌ಬೇಗ್:- 34 ಜನರನ್ನು ಬಂಧಿಸಲಾಗಿದೆ ಇವರಲ್ಲಿ 15 ಜನ ಪರಿಶಿಷ್ಟ ಜಾತಿಗೆ ಸೇರಿದವರು. ಉಳಿದವರ ಮನೆಗಳಿಗೆ ಬೆಂಕಿಯನ್ನು ಹಚ್ಚಿದ್ದಾರೋ ಅವರೆಲ್ಲರೂ ಅದರಲ್ಲಿ ಬರುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅಷ್ಟು ದೊಡ್ಡ ಸ್ಥಳಕ್ಕೆ ಅಟ್ಯಾಕ್ ಮಾಡಬೇಕಾದರೆ 15 ಜನರನ್ನು ಬಿಟ್ಟು ಬರೀ 12-13 ಜನರು ಎಂದು ಹೇಳಿದ್ದೀರಿ. ಎಸ್.ಸಿ.:ಎಸ್.ಟಿ. ಜನಾಂಗದವರು 50 ಪರ್ಸೆಂಟ್ ಇದ್ದಾರೆಂದು ತಾವೇ ಹೇಳಿದ್ದೀರಿ, ಅದರಿಂದ ಅಷ್ಟೇ ಜನರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಆ ಒಂದು ನೆಪದಲ್ಲಿ ಎಲ್ಲರಿಗೂ ಅನ್ಯಾಯವಾಗುವಂಥದ್ದು ಮುಚ್ಚಿ ಹೋಗಬಾರದು.

ಅಧ್ಯಕ್ಷರು:-ಕೇಸ್ ಅಂಡ್ ಕೌಂಟರ್ ಕೇಸ್ ಆಗುತ್ತದೆ. ನಿಮ್ಮ ಸ್ಥಳೀಯ ಅಧಿಕಾರಿಗಳು ಲೆಥಾರ್ಜಿಕ್ ಆಗಿ ಉದ್ದೇಶ ಪೂರ್ವಕವಾಗಿ ಗಲಾಟೆ ಮಾಡಿರುವವರನ್ನು ಬಿಟ್ಟಿರಬಹುದು. ಅದು ಆಗದಂತೆ ತಾವು ನೋಡಿಕೊಳ್ಳಿ. Please see that all those who are responsible for this counter attack, they should all be brought to book.

+ಶ್ರೀ ಸಯದ್ ಜುಲ್ಫಿಕರ್ ಹಶ್‌ಮಿ (ಬೀದರ್):- ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಸೂಲನಾಯಕನಹಳ್ಳಿಯ ಸುತ್ತಮುತ್ತ ಭೇಟಿಯನ್ನು ಕೊಟ್ಟಿದ್ದೆ. ಎರಡು ಭಾಗಗಳಿವೆ ಒಂದು ಕಡೆ ಶ್ರೀ ವೆಂಕಟೇಶನಾಯ್ಡು ಕೊಲೆಯಾಗಿದೆ ಮತ್ತೊಂದು ಕಡೆ ಷೆಡ್ಯೂಲ್ ಕ್ಯಾಷ್ಟ್‌ಗಳ ಮನೆಗಳೆಲ್ಲೂ ಸುಟ್ಟು ಹೋಗಿದೆ. ಆ ಸ್ಥಳಕ್ಕೆ ನಾನು ಹೋಗಿದ್ದಾಗ ಪೋಲೀಸ್ ಅಧಿಕಾರಿಗಳು ನಮಗೆ ಏನು ಹೇಳಿದರು ಎಂದರೆ, ಷೆಡ್ಯೂಲ್ ಕ್ಯಾಷ್ಟ್ ಮನೆಗಳು ಯಾರದ್ದು ಸುಟ್ಟು ಹೋಗಿವೆ ಅವರಿಂದಾಗಲಿ ಅಥವಾ ಯಾರಿಂದಾಗಲಿ ನಮಗೆ ಕಂಪ್ಲೇಂಟ್ ಬಂದಿಲ್ಲ. ಆದುದರಿಂದ ನಾವು ಯಾರನ್ನು ಬಂಧಿಸಿಲ್ಲವೆಂದು ಹೇಳಿದರು. ಇವತ್ತು ಆ ಸೂಲನಾಯಕನಹಳ್ಳಿಯ ಪರಿಶಿಷ್ಟ ಜಾತಿಯ ಜನರು ಹೆದರಿಕೆಯಿಂದ ಇವತ್ತು ಬೇರೆಬೇರೆ ಹಳ್ಳಿಗಳಿಗೆ ಹೋಗಿದ್ದಾರೆ. ಅವರುಗಳನ್ನೆಲ್ಲಾ ಮತ್ತೆ ಊರಿಗೆ ಕರೆಸಿ ಎಂದು ನಮ್ಮ ಪಕ್ಷದ ವತಿಯಿಂದ ದಲಿತ ಸಂಘರ್ಷ ಸಮಿತಿಯವರು ಕರೆದುಕೊಂಡು ಬಂದು ಪೋಲೀಸ್‌ನವರಿಗೆ ಕಂಪ್ಲೇಂಟನ್ನು ಕೊಡಿಸಿದ್ದೇವೆ. ಆದರೆ ಈಗ ಈ ಘಟನೆಯು ನಡೆದು ಒಂದು ವಾರಗಳ ಕಾಲ ಆಯಿತು. ಆದರೆ ಪೋಲೀಸ್ ಅಧಿಕಾರಿಗಳು ಯಾರನ್ನು ಬಂಧಿಸಿಲ್ಲ. ಸೂಲನಾಯಕನಹಳ್ಳಿಯ ಸುತ್ತಮುತ್ತ ಇರತಕ್ಕಂತಹ 20-25 ಹಳ್ಳಿಯ ಷೆಡ್ಯೂಲ್ ಕ್ಯಾಸ್ಟ್ ಜನಾಂಗದವರು ಒಂದು ವಾರದಿಂದ ನಮ್ಮ ಆಫೀಸ್‌ನಲ್ಲಿ ವಾಸಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ಬಹಳ ಸೀರಿಯಸ್ ಮ್ಯಾಟರ್. ಅಲ್ಲಿ ಏನಾಗಿದೆ ಎಂದರೆ ಒಂದು ಕಡೆ ವೆಂಕಟೇಶನಾಯ್ಡುರವರ ಕೊಲೆಯು ನಡೆದಿದೆ. ಮತ್ತೊಂದು ಸುಮಾರು 100 ಷೆಡ್ಯೂಲ್ ಕ್ಯಾಷ್ಟ್ ಮನೆಗಳನ್ನು ಸುಟ್ಟು ಹಾಕಲಾಗಿದೆ. ಆದರೆ ಅಲ್ಲಿ ಇದರ ಸಂಬಂಧಪಟ್ಟಂತಹ ಅಪರಾಧಿಗಳನ್ನು ಯಾರೊಬ್ಬರನ್ನೂ ಸಹ ಅಲ್ಲಿ ಬಂಧಿಸಿಲ್ಲ. ಮತ್ತೆ ಅಕ್ಕಪಕ್ಕ ಹಳ್ಳಿಯಲ್ಲಿ ಯಾರು ಶೆಡ್ಯೂಲ್ ಕ್ಯಾಸ್ಟ್ ಹುಡುಗರು ಇದ್ದಾರೆ, ವಿದ್ಯಾರ್ಥಿಗಳಿದ್ದಾರೆ ಅವರನ್ನು ಹಿಡಿದುಕೊಂಡು ಬಂದು ನೀವು ನಕ್ಸಲಿಯರು ಎಂದು ಹಿಡಿದುಕೊಂಡು ಪೋಲೀಸ್ ಠಾಣೆಯೊಳಗೆ ಹಾಕುತ್ತಿದ್ದಾರೆ. ಎಷ್ಟೋ ಜನರನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಅವರಿಂದ ಹಣವನ್ನು ತೆಗೆದುಕೊಂಡೇ ಬಿಟ್ಟಿದ್ದಾರೆ. ಹಾಗಾಗಿ ಅಲ್ಲಿ ಏನಾಗಿದೆ ಪರಿಸ್ಥಿತಿ ಎಂದರೆ ಆ ಹುಡುಗರ ಸಂಬಂಧವು ನಕ್ಸಲಿಯರ ಜೊತೆಯಲ್ಲಿ ಇಲ್ಲ. ಇಂತಹ ದೌರ್ಜನ್ಯವು ಬಡವರ ಮೇಲೆ ಮತ್ತು ದಲಿತರ ಮೇಲೆ ಪೋಲೀಸ್‌ನವರು ಮಾಡುತ್ತಾರೆ. ತಪ್ಪಿತಸ್ಥರಲ್ಲದವರ ಮೇಲೆ ಈ ರೀತಿಯಾಗಿ ಮಾಡುವುದರಿಂದ ಅವರ ಮೈಂಡ್ ಅಪ್‌ಸೆಟ್ ಆಗುತ್ತದೆ. ಆದುದರಿಂದ ನನ್ನ ಅಭಿಪ್ರಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಬಡವರ ಮತ್ತು ದಲಿತರ ಮೇಲೆ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರದವರು ಅನ್ಯಾಯವಾಗಿರತಕ್ಕಂಥವರಿಗೆ ನ್ಯಾಯವನ್ನು ಒದಗಿಸಿಕೊಡಬೇಕು. ಷೆಡ್ಯೂಲ್ ಕ್ಯಾಸ್ಟ್‌ನವರನ್ನು ಹಿಡಿಯುತ್ತೀರಿ. ಆದರೆ ಬೇರೆಯವರನ್ನು ಬಿಡುತ್ತೀರಿ, ಇಂತಹ ದೌರ್ಜನ್ಯವು 20 ಹಳ್ಳಿಗಳಿಗಿಂತಲೂ ಹೆಚ್ಚು ಹಳ್ಳಿಗಳಲ್ಲಿ ಇದೆ. ನಾವು ವಿಧಾನ ಮಂಡಲದ ಎಸ್.ಸಿ.:ಎಸ್.ಟಿ. ಕಮಿಟಿಯ ಜೊತೆಯಲ್ಲಿ ಆ ಹಳ್ಳಿಗಳಿಗೆ ಹೋಗಿದ್ದೆವು. ಆದರೆ ಇವತ್ತು ಎಸ್.ಸಿ ಮತ್ತು ಎಸ್.ಟಿ.ಜನಾಂಗದವರು ಯಾರೂ ಆ

ಸೂಲನಾಯಕನಹಳ್ಳಿಯಲ್ಲಿ ಇಲ್ಲ. ಬೇರೆ ಬೇರೆ ಹಳ್ಳಿಗಳಿಗೆ ಹೋಗಿದ್ದಾರೆ. ಅವರನ್ನು ಭೇಟಿ ಮಾಡಿದಾಗ ಅವರುಗಳು ಏನು ಹೇಳುತ್ತಾರೆಂದರೆ ಪೋಲೀಸ್ ಅಧಿಕಾರಿಗಳು ನಮ್ಮ ರಕ್ಷಣೆಗೆ ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ಯಾರು ಭೂಮಾಲಿಕರು ಇದ್ದಾರೆ ಅವರ ರಕ್ಷಣೆಗಾಗಿ ಇದ್ದಾರೆಂದು ಹೇಳುತ್ತಾರೆ. ಪೋಲೀಸ್‌ನವರ ಮೇಲೆ ನಮಗೆ ವಿಶ್ವಾಸವಿಲ್ಲವೆಂದು ಹೇಳುತ್ತಾರೆ. ಆದುದರಿಂದ ಸರ್ಕಾರದಲ್ಲಿ ನನ್ನ ಒಂದು ವಿನಂತಿ ಏನೆಂದರೆ ತಾವು ಇದರ ಬಗ್ಗೆ ಯಾರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಯಾರು ಕೊಲೆಯನ್ನು ಮಾಡಿದ್ದಾರೆ ಅವರನ್ನು ಬಂಧಿಸಿ, ಆ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಯಾರು ಷೆಡ್ಯೂಲ್ಡ್ ಕ್ಯಾಸ್ಟ್ ಮನೆಗಳನ್ನು ಸುಟ್ಟು ಹಾಕಿದ್ದಾರೆ ಇದರಲ್ಲಿ ಯಾರು ಅಪರಾಧಿಗಳಿದ್ದಾರೆ ಅವರುಗಳನ್ನು ತಕ್ಷಣ ಬಂಧಿಸಬೇಕು. ಮತ್ತು 20-25 ಹಳ್ಳಿಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಮೇಲೆ ಪೋಲೀಸ್‌ನವರು ಏನು ದೌರ್ಜನ್ಯವನ್ನು ಮಾಡುತ್ತಿದ್ದಾರೆ ಅದನ್ನು ಸಹ ತಕ್ಷಣದಿಂದಲೇ ನಿಲ್ಲಿಸುವಂತಹ ವ್ಯವಸ್ಥೆಯನ್ನು ಸರ್ಕಾರದವರ ಮಾಡಬೇಕು.

SRI ROSHAN BAIG:- Sir, I share the concern expressed by the Hon'ble members. Today itself I will depute a senior officer of the rank of Additional D.G.P to go to the spot and to investigate.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕು ಅದೆಂದರೆ ಈಗ 34 ಜನರನ್ನು ಏನು ಅರೆಸ್ಟ್ ಮಾಡಿದ್ದಾರೆ. ಇದರಲ್ಲಿ ಕೊಲೆಗೆ ಸಂಬಂಧಪಟ್ಟಂತೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಮತ್ತು ಈ ನಮ್ಮ ಎಸ್.ಸಿ.:ಎಸ್.ಟಿ. ಮನೆಗಳನ್ನು ಸುಟ್ಟಿದ್ದಾರೆಂದು ಹೇಳುತ್ತಾರಲ್ಲಾ ಅದಕ್ಕೆ ಸಂಬಂಧಪಟ್ಟಂತೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಎರಡನೆಯದಾಗಿ ಸುಟ್ಟಂತಹ ಮನೆಗಳನ್ನು ಮತ್ತೆ ಕಟ್ಟಿಸಿಕೊಡುವುದಕ್ಕೆ ಸರ್ಕಾರ ಯಾವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡುತ್ತದೆ? ಅವರಿಗೆ ಪರಿಹಾರವನ್ನು ಕೊಡಬೇಕು ಏಕೆಂದರೆ, ಇದು ಮನೆಗಳನ್ನು ಸುಟ್ಟು ಹಾಕಿರುವುದು ಅವರವರ ಜಗಳದಲ್ಲಿ ಆಗಿರುವಂಥದ್ದು ಅಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಮೇಲೆ ಬೇರೆಯವರು ಬಂದು ದೌರ್ಜನ್ಯವನ್ನು ಮಾಡಿ ಅವರ ಮನೆಗಳನ್ನು ಸುಟ್ಟು ಹಾಕಿರುವಂಥದ್ದು. ಅವರವರ ಜಗಳದಲ್ಲಿ ಇದು ಆಗಿದ್ದರೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಬರುವುದಿಲ್ಲ. ಬೇರೆಯವರು ಅಟ್ರಾಸಿಟಿಯನ್ನು ಮಾಡಿ ಮನೆಗಳನ್ನು ಸುಟ್ಟಿರುವುದು. ಅದಕ್ಕೆ ತಾವು ಸರ್ಕಾರದವರು ಯಾವ ರೀತಿಯಲ್ಲಿ ಪರಿಹಾರವನ್ನು ಕೊಡುತ್ತೀರಿ? ಮೂರನೆಯದಾಗಿ ಹುಡುಗರಿಗೆ ನೀವು ನಕ್ಸಲಿಯರು ಎಂದು ಪೋಲೀಸ್‌ನವರು ತೊಂದರೆಯನ್ನು ಕೊಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಏನು ಪ್ರಯತ್ನವನ್ನು ಮಾಡುತ್ತೀರಿ?

ಶ್ರೀ ಆರ್.ರೋಷನ್ ಬೇಗ್:- ರಿಲೀಫ್ ಕೆಲಸವನ್ನು ಮಾಡಬೇಕೆಂದು ಹೇಳಿದ್ದಾರೆ.

ನಾನು ಅದನ್ನು ಪರಿಶೀಲನೆಯನ್ನು ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಮುಖ್ಯ ಅಧಿಕಾರಿಗಳ ಜೊತೆಯಲ್ಲಿ ಕುಳಿತುಕೊಂಡು ಮಾತನಾಡಿ ಯಾವ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳಬೇಕೋ ಆ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಸುಟ್ಟಂತಹ ಮನೆಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಅವಕಾಶವಿದೆ. ಅದಕ್ಕೆ ಪರಿಶೀಲನೆಯನ್ನು ಮಾಡುತ್ತೇನೆಂದು ಹೇಳುತ್ತಾರೆ.

MR.SPEAKER:- It comes outside the perview of Dept. of Home. ನಾನು ಸರ್ಕಾರದ ಜೊತೆಯಲ್ಲಿ ಮಾತನಾಡುತ್ತೇನೆಂದು ಹೇಳಿದ ತಕ್ಷಣ. it is not that he has not looked into it. on other problems relating to Home Dept., ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸುತ್ತೇನೆಂದು ಹೇಳಿದ್ದಾರೆ. With regard to the relief, ಪರಿಶೀಲನೆ ಎಂದು ಹೇಳಿದ್ದಾರೆ. ಅಂದರೆ he will talk to the concerned Minister. I will pursue.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅವರ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಹಿಂದೆ ಒಂದು ಪೂರ್ವ ನಿಯೋಜಿತ ಸಂಚು ಇದೆ ಎಂದು ಭಾವಿಸಿದ್ದೇನೆ. ದಯಮಾಡಿ ತಮ್ಮ ಪೋಲಿಸ್ ಪರ್ಸನಲ್ ಅನ್ನು ಬದಲಾವಣೆಯನ್ನು ಮಾಡಿದರೆ ಆಗ ಪೂರ್ಣ ಸಿಸ್ಟಂ ಸರಿಯಾಗುತ್ತದೆ. ಅವರನ್ನು ಇಟ್ಟುಕೊಂಡು ನೊಂದವರಿಗೆ ಪರಿಹಾರವನ್ನು ಕೊಡುತ್ತೇವೆಂದು ಹೋದರೆ ಅದು ಪರಿಹಾರವಾಗುವುದಿಲ್ಲ. ಆದುದರಿಂದ ದಯಮಾಡಿ ಸರ್ಕಾರದವರು ಆ ನಿಟ್ಟಿನಲ್ಲಿ ತಾವು ಪ್ರಯತ್ನವನ್ನು ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಹಿಂದೆ ಇದಕ್ಕೆ ಸಂದರ್ಭದಲ್ಲಿ ಉತ್ತರವನ್ನು ಕೊಡುವಾಗ ಇಲ್ಲಿ ಹೊರಗಿನವರ ಕೈವಾಡ ಇದೆ ಎಂದು ಹೇಳಿದರು.

02-10 ಪಿ.ಎಂ.

ಹೊರಗಿನವರ ಕೈವಾಡ ಅಂದರೆ ಯಾರು ಎಂದು ಸರ್ಕಾರ ಪತ್ತೆಹಚ್ಚಿದೆಯೆ? ಸರ್ಕಾರದ ಗಮನಕ್ಕೆ ಅದು ಬಂದಿದೆಯೇ? ಹೊರಗಡೆ ಅಂದರೆ ನಮ್ಮ ರಾಜ್ಯ ಅಲ್ಲ, ಬೇರೆ ಕಡೆಯಿಂದ ಬಂದಿರತಕ್ಕವರು. ಒಂದೇ ಸಾರಿ ಮನೆಗಳನ್ನು ಸುಡಬೇಕಾದರೆ ಹೊರಗಿನವರ ಕೈವಾಡ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಇಲ್ಲಿ ಉತ್ತರ ಕೊಡುವಾಗ ಹೇಳಿದರು. ಆದುದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಆರ್.ರೋಷನ್‌ಬೇಗ್:- ಅದಕ್ಕೆ ಸಿ.ಓ.ಡಿ ಎನ್‌ಕ್ವೈರಿ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಸಿ.ಓ.ಡಿ. ಎನ್‌ಕ್ವೈರಿಯಿಂದ ಹೊರಗಿನವರ ಕೈವಾಡ ಗೊತ್ತಾಗುವುದಿಲ್ಲ. ಸಿಓಡಿ. ಎನ್‌ಕ್ವೈರಿ ನಮ್ಮ ರಾಜ್ಯದಲ್ಲಿ ಆಗತಕ್ಕ ವಿಚಾರಗಳಿಗೆ ಆಗುತ್ತದೆ. ಹೊರಗಿನವರ ವಿಚಾರಗಳಿಗೆ ಸಿಬಿಐ ತನಿಖೆ ಮಾಡಬೇಕಾಗುತ್ತದೆ. ನೀವು ಸಿಬಿಐ ತನಿಖೆ ಮಾಡುತ್ತಿಲ್ಲ. ಸಿಓಡಿ.ಗೆ ಕೊಟ್ಟಿರುವುದರಿಂದ.....

ಶ್ರೀ ಆರ್.ರೋಷನ್‌ಬೇಗ್:- ಸಿಒಡಿ. ಎನ್‌ಕ್ವೈರಿ ಮಾಡುತ್ತಿರುವುದಕ್ಕೆ ಒಂದು ಆಪಾದನೆ ಏನಿದೆ ಎಂದರೆ ಆ ಊರಿನಲ್ಲಿ ಸುತ್ತಮುತ್ತ ಆಂಧ್ರಪ್ರದೇಶದ ಬಾರ್ಡರ್‌ನಲ್ಲಿ ನಕ್ಸಲೈಟ್ಸ್ ಹಾವಳಿ ಇದೆ ಎಂದು. ಅವರು ಬಂದು ಗಲಾಟೆ ಮಾಡಿರಬಹುದೆಂದು ಆಪಾದನೆ ಇರುವುದರಿಂದ ಅದನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:- ಸದನದ ಸಮಿತಿ ಸ್ಥಳಕ್ಕೆ ಹೋಗಿಬಂದಿದೆ. ಸದನದ ಸಮಿತಿಯ ವರದಿ ಏನಿದೆ ಅದರ ಆಧಾರದ ಮೇಲೆ ಏನಾದರೂ ಇಂಪ್ಲಿಮೆಂಟ್ ಮಾಡುತ್ತೀರೋ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಅಧ್ಯಕ್ಷರು:- ರಿಪೋರ್ಟ್ ಕೊಡಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:- ದಲಿತರ ಮೇಲೆ ಅನ್ಯಾಯವಾಗುತ್ತದೆ. ಅದಕ್ಕೆ ಕಮಿಷನ್ ಅಪಾಯಿಂಟ್ ಆಗುತ್ತದೆ, ಕಮಿಟಿ ಅಪಾಯಿಂಟ್ ಆಗುತ್ತದೆ. ಅದರ ಮೇಲೆ ಏನೂ ಆಗುವುದಿಲ್ಲ. ರಿಪೋರ್ಟ್ ಬಂದಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೀರೋ ಅಥವ ಇಲ್ಲವೋ ಎಂದು ತಮ್ಮಮೂಲಕ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಅಧ್ಯಕ್ಷರು:- ನೀವು ರಿಪೋರ್ಟ್ ಕೊಟ್ಟಿಲ್ಲವಲ್ಲಾ. ರಿಪೋರ್ಟ್ ಕೊಟ್ಟ ಮೇಲೆ ಅಲ್ಲವೆ ಆ್ಯಕ್ಷನ್ ತೆಗೆದುಕೊಳ್ಳುವುದು.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:- ಎರಡು ದಿನಗಳಲ್ಲಿ ರಿಪೋರ್ಟ್ ಕೊಡಬಹುದು.

ಅಧ್ಯಕ್ಷರು:- ಆಯಿತು, ನೀವು ರಿಪೋರ್ಟ್ ಕೊಟ್ಟಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಈಗ ಸಭೆಯನ್ನು ಮುಂದೂಡಲಾಗಿದೆ, ಪುನಃ 3.15ಕ್ಕೆ ಸಭೆ ಸೇರುವುದು.

(ಸಭೆ ಮಧ್ಯಾಹ್ನ 2.12ಕ್ಕೆ ಮುಂದೂಡಲ್ಪಟ್ಟು ಪುನಃ 3.15ಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು)

03.30 ಪಿ.ಎಂ

(ಸಭೆಯು 3-30 ಗಂಟೆಗೆ ಪುನಃ ಸಮಾವೇಶಗೊಂಡಿತು.)

(ಉಪಾಧ್ಯಕ್ಷರಾದ ಚಂದ್ರಶೇಖರ ಮಾಮನಿಯವರು ಪೀಠವನ್ನು ಅಲಂಕರಿಸಿದರು)